ಕರ್ನಾಟಕ ಸರ್ಕಾರ

ಸಾರ್ವಜನಿಕ ಶಿಕ್ಷಣ ಇಲಾಖೆ

ಆಯುಕ್ತರ ಕಛೇರಿ, ಹೊಸ ಸಾರ್ವಜನಿಕ ಕಛೇರಿಗಳು, ನೃಪತುಂಗ ರಸ್ತೆ, ಬೆಂಗಳೂರು-560001

ಸಂಖ್ಯೆ: ಸಿ5(9) ಸ.ನೌ.ಪ್ರ/08/2017-18 ದಿನಾಂಕ:05/05/2017

**: ಜ್ಞಾಪನ :**

ವಿಷಯ : ಸಾರ್ವಜನಿಕ ಶಿಕ್ಷಣ ಇಲಾಖೆಯ ನೌಕರರ ಹೆಸರನ್ನು ಪ್ರಶಸ್ತಿಗೆ ಶಿಫಾರಸ್ಸು ಮಾಡುವ ಬಗ್ಗೆ ;

ಉಲ್ಲೇಖ : ಸರ್ಕಾರದ ಆದೇಶ ಸಂಖ್ಯೆ:ಸಿಆಸುಇ:105:ಇಅಸು.2011, ದಿನಾಂಕ: 20-11-2012, ತಿದ್ದುಪಡಿ ದಿನಾಂಕ: 15/04/2013 ;
2) ಸರ್ಕಾರದ ಸುತ್ತೋಲೆ ಸಂಖ್ಯೆ:ಸಿಆಸುಇ:35; ಇಅಸು:2017; ದಿನಾಂಕ: 06-04-2017 ;

----

ರಾಜ್ಯ ಸರ್ಕಾರವು ಅತ್ಯುತಮ ಸೇವೆ ಸಲ್ಲಿಸಿದ / ಸಾಧನೆ ಮಾಡಿರುವ ರಾಜ್ಯ ಸರ್ಕಾರಿ ನೌಕರರಿಗೆ **"ಸರ್ವೋತ್ತಮ ಸೇವಾ ಪ್ರಶಸ್ತಿ"** ಅನ್ನು ನೀಡುವ ಯೋಜನೆಯನ್ನು ಹಮ್ಮಿಕೊಂಡಿದ್ದು, ಈ ಯೋಜನೆಯಡಿ ಜಿಲ್ಲಾವಾರು ಪ್ರಶಸ್ತಿ, ಇಲಾಖಾವಾರು ಪ್ರಶಸ್ತಿ ಹಾಗೂ ರಾಜ್ಯ ಪ್ರಶಸ್ತಿ ನೀಡುವುದನ್ನು ಉಲ್ಲೇಖದ ಆದೇಶ / ಸುತ್ತೋಲೆಗಳನ್ವಯ ಜಾರಿಗೆ ತಂದಿರುವುದು ಸರಿಯಷ್ಟೆ. (ಆದೇಶ / ಸುತ್ತೋಲೆ ಪ್ರತಿ ಲಗತ್ತಿಸಿದೆ)

ಸರ್ಕಾರದ ಮಾರ್ಗಸೂಚಿಗಳಂತೆ ಇಲಾಖಾವಾರು ಸರ್ವೋತ್ತಮ ಸೇವಾ ಪ್ರಶಸ್ತಿಗೆ ಅರ್ಹ ಅಧಿಕಾರಿ / ನೌಕರರ ನಾಮನಿರ್ದೇಶನಗಳನ್ನು ಅನುಬಂಧಿಸಿರುವ ನಿಗದಿತ ನಮೂನೆಯಲ್ಲಿ ಭರ್ತಿ ಮಾಡಿ ದಿನಾಂಕ : 20/05/2017 ರೊಳಗೆ, ಜಂಟಿ ನಿರ್ದೇಶಕರು (ಆಡಳಿತ), ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು, ಇವರ ಆಪ್ತ ಶಾಖೆಗೆ ಸಲ್ಲಿಸುವಂತೆ ತಿಳಿಸಿದೆ.

(ಎಸ್.ಕಾತ್ಯಾಯನಿ ದೇವಿ)
ಜಂಟಿ ನಿರ್ದೇಶಕರು (ಆಡಳಿತ)

ಗೆ :

1) ಅಪರ ಆಯುಕ್ತರು, ಸಾ.ಶಿ.ಇಲಾಖೆ, ಧಾರವಾಡ ಮತ್ತು ಕಲಬುರ್ಗಿ ಆಯುಕ್ತಾಲಯ, ಇವರುಗಳು ತಮ್ಮ ಆಡಳಿತ ವ್ಯಾಪ್ತಿಗೆ ಸಂಬಂಧಿಸಿದ ಎಲ್ಲಾ ಕಛೇರಿಗಳಿಂದ ಮಾಹಿತಿಯನ್ನು ಕ್ರೋಡಿಕರಿಸಿ ಸಲ್ಲಿಸಲು ಕೋರಿದೆ ;
2) ರಾಜ್ಯ ಯೋಜನಾ ನಿರ್ದೇಶಕರು, ಸರ್ವಶಿಕ್ಷಣ ಅಭಿಯಾನ ಕಛೇರಿ, ಬೆಂಗಳೂರು ;
3) ನಿರ್ದೇಶಕರು, ಆರ್.ಎಂ.ಎಸ್.ಎ ಕಛೇರಿ, ಬೆಂಗಳೂರು ;
4) ನಿರ್ದೇಶಕರು, ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆ, ಬನಶಂಕರಿ, ಬೆಂಗಳೂರು ;
5) ನಿರ್ದೇಶಕರು, ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, ಮಲ್ಲೇಶ್ವರಂ, ಬೆಂಗಳೂರು ;
6) ನಿರ್ದೇಶಕರು, ಉರ್ದು ಮತ್ತು ಅಲ್ಪಸಂಖ್ಯಾತ ಭಾಷೆಗಳ ನಿರ್ದೇಶನಾಲಯ, ಬೆಂಗಳೂರು ;
7) ವ್ಯವಸ್ಥಾಪಕ ನಿರ್ದೇಶಕರು, ರಾಜ್ಯ ಪಠ್ಯ ಪುಸ್ತಕ ಸಂಘ, ಬನಶಂಕರಿ, ಬೆಂಗಳೂರು ;
8) ವಿಭಾಗೀಯ ಕಾರ್ಯದರ್ಶಿಗಳು & ಪದನಿಮಿತ್ತ ಜಂಟಿ ನಿರ್ದೇಶಕರ ಕಛೇರಿ, ಮೈಸೂರು ವಿಭಾಗ, ಮೈಸೂರು ;
9) ಸಹ ನಿರ್ದೇಶಕರು, ಮಧ್ಯಾಹ್ನ ಉಪಹಾರ ಯೋಜನೆ, ಕೆ.ಜಿ. ರಸ್ತೆ, ಕಾವೇರಿ ಭವನ ಎದುರು, ಬೆಂಗಳೂರು ;
10) ಸಹ ನಿರ್ದೇಶಕರು, ಶಿಕ್ಷಕರ ಕಲ್ಯಾಣ ನಿಧಿ, ಶಿಕ್ಷಕರ ಸದನ, ಕೆ.ಜಿ. ರಸ್ತೆ, ಬೆಂಗಳೂರು ;
11) ಪ್ರಾಂಶುಪಾಲರು, ಸರ್ಕಾರಿ ಶಿಕ್ಷಕರ ಶಿಕ್ಷಣ ಮಹಾವಿದ್ಯಾಲಯ, ಚಿತ್ರದುರ್ಗ, ಮೈಸೂರು ಮತ್ತು ಮಂಗಳೂರು ;
12) ಬೆಂಗಳೂರು ಆಯುಕ್ತಾಲಯ ವ್ಯಾಪ್ತಿಯ ಎಲ್ಲಾ ಉಪ ನಿರ್ದೇಶಕರು (ಆಡಳಿತ) ಹಾಗೂ (ಅಭಿವೃಧಿ) ;
13) ಬೆಂಗಳೂರು ಆಯುಕ್ತಾಲಯ ವ್ಯಾಪ್ತಿಯ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ (ಸಂಬಂಧಿಸಿದ ಉಪ ನಿರ್ದೇಶಕರು (ಆಡಳಿತ) ಇವರುಗಳ ಮೂಲಕ) ;
14) ಕಛೇರಿ ಪ್ರತಿ.

ಕರ್ನಾಟಕ ಸರ್ಕಾರ

ಸಂಖ್ಯೆ: ಸಿಆಸುಇ:35:ಇಆಸು:2017

ಕರ್ನಾಟಕ ಸರ್ಕಾರ ಸಚಿವಾಲಯ,
1ನೇ ಹಂತ, 6ನೇ ಮಹಡಿ,
ಕೊ.ಸಂ.609, ಬಹುಮಹಡಿಗಳ ಕಟ್ಟಡ,
ಬೆಂಗಳೂರು, ದಿನಾಂಕ:06.04.2017.

## ಸುತ್ತೋಲೆ

ರಾಜ್ಯ ಸರ್ಕಾರವು ಅತ್ಯುನ್ನತ ಸೇವೆ ಸಲ್ಲಿಸಿದ/ಸಾಧನೆ ಮಾಡಿರುವ ರಾಜ್ಯ ಸರ್ಕಾರಿ ನೌಕರರಿಗೆ "ಸರ್ವೋತ್ತಮ ಸೇವಾ ಪ್ರಶಸ್ತಿ"ಯನ್ನು ನೀಡುವ ಯೋಜನೆಯನ್ನು ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 105 ಇಆಸು 2011, ದಿನಾಂಕ:20.11.2012 ರಲ್ಲಿ ಮತ್ತು ತಿದ್ದುಪಡಿ ಆದೇಶ ದಿನಾಂಕ:15.04.2013 ರಲ್ಲಿ ಜಾರಿಗೆ ತರಲಾಗಿದೆ. ಈ ಯೋಜನೆಯಲ್ಲಿ ಜಿಲ್ಲಾವಾರು ಪ್ರಶಸ್ತಿ, ಇಲಾಖಾವಾರು ಪ್ರಶಸ್ತಿ ಹಾಗೂ ರಾಜ್ಯ ಪ್ರಶಸ್ತಿ ನೀಡುವುದನ್ನು ಜಾರಿಗೆ ತರಲಾಗಿದೆ.

ಸದರಿ ಯೋಜನೆಯಂತೆ 'ಇಲಾಖಾವಾರು ಪ್ರಶಸ್ತಿ'ಗೆ ಒಂದು ಇಲಾಖೆಗೆ ಒಂದು ಪ್ರಶಸ್ತಿಯನ್ನು ನೀಡಲಾಗುವುದು. ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 105 ಇಆಸು 2011, ದಿನಾಂಕ:20.11.2012 ರಲ್ಲಿರುವ ಎಲ್ಲಾ ಮಾರ್ಗಸೂಚಿಗಳಂತೆ ಇಲಾಖಾವಾರು ಸರ್ವೋತ್ತಮ ಸೇವಾ ಪ್ರಶಸ್ತಿಗೆ ರಚಿಸಲಾಗಿರುವ ಮೌಲ್ಯಮಾಪನ ಸಮಿತಿ ಸಭೆಯಲ್ಲಿ ಆಯ್ಕೆಗೊಂಡ ಕ್ಷೇತ್ರ ಇಲಾಖೆಗಳ ಅರ್ಹ ಅಧಿಕಾರಿ/ನೌಕರರ ನಾಮನಿರ್ದೇಶನಗಳನ್ನು ಇಲಾಖಾ ಅಪರ ಮುಖ್ಯ ಕಾರ್ಯದರ್ಶಿ/ಪ್ರಧಾನ ಕಾರ್ಯದರ್ಶಿ/ಕಾರ್ಯದರ್ಶಿಯವರು ಕಡ್ಡಾಯವಾಗಿ ಈ ಕೆಳಕಂಡ ವರದಿಗಳೊಂದಿಗೆ ಶಿಫಾರಸ್ಸು ಮಾಡಬೇಕಾಗಿರುತ್ತದೆ ಹಾಗೂ ಇದರೊಂದಿಗೆ ಲಗತ್ತಿಸಿರುವ ಅನುಬಂಧದ ನಮೂನೆಯಂತೆ ಪೂರ್ಣಗೊಳಿಸಿರುವ ನಾಮನಿರ್ದೇಶನಗಳನ್ನು ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ (ಆಡಳಿತ ಸುಧಾರಣೆ) ಇವರಿಗೆ ದಿನಾಂಕ:31.05.2017 ರೊಳಗೆ ಕಳುಹಿಸಿಕೊಡುವುದು.

1. ಅಧಿಕಾರಿ/ನೌಕರರ ವಿಶೇಷ ಕಾರ್ಯನಿರ್ವಹಣಾ ಮೌಲ್ಯಮಾಪನ ವರದಿ.
2. ಅಧಿಕಾರಿ/ನೌಕರರ ವಿರುದ್ಧ ಯಾವುದೇ ನ್ಯಾಯಾಂಗ ತನಿಖೆ/ಕ್ರಿಮಿನಲ್ ಮೊಕದ್ದಮೆ ಬಾಕಿ ಇದೆಯೇ/ಇಲ್ಲವೇ ಹಾಗೂ ಹೂಡಲು ಉದ್ದೇಶಿಸಲಾಗಿದೆಯೇ ಎಂಬ ಬಗ್ಗೆ ವರದಿ.
3. ಅಧಿಕಾರಿ/ನೌಕರರ ವಿರುದ್ಧ ಯಾವುದೇ ಲೋಕಾಯುಕ್ತ ವಿಚಾರಣೆ/ಇಲಾಖಾ ವಿಚಾರಣೆ ಬಾಕಿ ಇದೆಯೇ/ಇಲ್ಲವೇ ಹಾಗೂ ಹೂಡಲು ಉದ್ದೇಶಿಸಲಾಗಿದೆಯೇ ಎಂಬ ಬಗ್ಗೆ ವರದಿ.

(ಸುಜಾತ ಹೆಚ್.ಎಸ್)
ಸರ್ಕಾರದ ಅಧೀನ ಕಾರ್ಯದರ್ಶಿ,
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ,
(ಆಡಳಿತ ಸುಧಾರಣೆ-ಶಾಖೆ-3).

ಇವರಿಗೆ:

1. ಸರ್ಕಾರದ ಎಲ್ಲಾ ಇಲಾಖೆಗಳ ಅಪರ ಮುಖ್ಯ ಕಾರ್ಯದರ್ಶಿ/ ಪ್ರಧಾನ ಕಾರ್ಯದರ್ಶಿ/ಕಾರ್ಯದರ್ಶಿಗಳು.
2. ಎಲ್ಲಾ ಇಲಾಖಾ ಮುಖ್ಯಸ್ಥರು,
3. ಎಲ್ಲಾ ಜಿಲ್ಲಾಧಿಕಾರಿಗಳು,
4. ಎಲ್ಲಾ ಜಿಲ್ಲೆಗಳ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿಗಳು.
5. ಅಧ್ಯಕ್ಷರು, ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘ, ಕಬ್ಬನ್ ಪಾರ್ಕ್, ಬೆಂಗಳೂರು.

...2)

ಪ್ರತಿ:

1. ಸರ್ಕಾರದ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ವಿಧಾನ ಸೌಧ, ಬೆಂಗಳೂರು.
2. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ವಿಧಾನ ಸೌಧ, ಬೆಂಗಳೂರು.
3. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರ ಆಪ್ತ ಸಹಾಯಕರು, ಸಿ.ಆ.ಸು.ಇ (ಆ.ಸು), ಬಹುಮಹಡಿ ಕಟ್ಟಡ, ಬೆಂಗಳೂರು.
4. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿ.

## ಅನುಬಂಧ

### ಸರ್ವೋತ್ತಮ ಸೇವಾ ಪ್ರಶಸ್ತಿ ನಾಮನಿರ್ದೇಶನ ಸಲ್ಲಿಸಲು ನಮೂನೆ

| ಕ್ರ. ಸಂ. | ಅಧಿಕಾರಿ/ ನೌಕರರ ಹೆಸರು | ಪದನಾಮ ಮತ್ತು ಇಲಾಖೆ | ಶಿಫಾರಸ್ಸು ಮಾಡಿರುವ ಇಲಾಖಾ ಅಪರ ಮುಖ್ಯ ಕಾರ್ಯದರ್ಶಿಗಳು/ ಪ್ರಧಾನ ಕಾರ್ಯದರ್ಶಿಗಳು/ ಕಾರ್ಯದರ್ಶಿಗಳು | ಸಾಧನೆಗಳ ವಿವರ | ವಿಶೇಷ ಕಾರ್ಯ ನಿರ್ವಹಣಾ ವರದಿ | ನ್ಯಾಯಾಂಗ ತನಿಖೆ/ ಕ್ರಿಮಿನಲ್ ಮೊಕದ್ದಮೆ ಬಾಕಿ ಇದೆಯೇ/ ಹೂಡಲು ಉದ್ದೇಶಿಸ ಲಾಗಿದೆಯೇ | ಲೋಕಾಯುಕ್ತ ವಿಚಾರಣೆ / ಇಲಾಖಾ ವಿಚಾರಣೆ ಬಾಕಿ ಇದೆಯೇ/ ಹೂಡಲು ಉದ್ದೇಶಿಸ ಲಾಗಿದೆಯೇ | ಇತರೆ ಯಾವುದೇ ಷರಾ |
|---|---|---|---|---|---|---|---|---|
| | | | | | | | | |

# ಕರ್ನಾಟಕ ಸರ್ಕಾರ

ಸಂಖ್ಯೆ: ಸಿಆಸುಇ:105:ಇಆಸು:2011

ಕರ್ನಾಟಕ ಸರ್ಕಾರದ ಸಚಿವಾಲಯ
ಬಹುಮಹಡಿಗಳ ಕಟ್ಟಡ,
ಬೆಂಗಳೂರು. ದಿನಾಂಕ:15.04.2013

## ತಿದ್ದುಪಡಿ

ಸರ್ಕಾರದ ಆದೇಶ ಸಂಖ್ಯೆ:ಸಿಆಸುಇ:105:ಇಆಸು:2011, ಬೆಂಗಳೂರು ದಿನಾಂಕ: 20.11.2012. ರಲ್ಲಿ ಸರ್ಕಾರವು ಆದೇಶಿಸಿದ 3ನೇ ಕಂಡಿಕೆಯ 5ನೇ ಭಾಗದಲ್ಲಿ ಈ ಯೋಜನೆಯಡಿ ಪ್ರಶಸ್ತಿ ಪುರಸ್ಕಾರವು ಮೂರು ಹಂತಗಳಲ್ಲಿ ನಮೂದಿಸಿದ್ದ, ಮೊತ್ತದ ವಿವರವನ್ನು ಮಾರ್ಪಡಿಸಿ ಈ ಕೆಳಗಿನಂತೆ ಸೇರ್ಪಡೆಗೊಳಿಸಿದೆ. ಮುಂದುವರೆದು,

| ಕ್ರಮ ಸಂಖ್ಯೆ | ಪ್ರಶಸ್ತಿ | ಪ್ರಶಸ್ತಿಗಳ ಸಂಖ್ಯೆ | ಪ್ರಶಸ್ತಿವಾರು ಮೊತ್ತ | ಒಟ್ಟು |
|---|---|---|---|---|
| 1. | ಜಿಲ್ಲಾವಾರು ಪುರಸ್ಕಾರ (ಪ್ರತಿಯೊಂದು ಜಿಲ್ಲೆಗೆ ಒಟ್ಟು 30 ಜಿಲ್ಲೆ) | 6 | ರೂ.10,000 | ರೂ.18,00,000 |
| 2. | ಇಲಾಖಾವಾರು | 30 | ರೂ.15,000 | ರೂ. 4,50,000 |
| 3. | ರಾಜ್ಯ ಪ್ರಶಸ್ತಿ | 10 | ರೂ.25,000 | ರೂ. 2,50,000 |
| | ಒಟ್ಟು | 46 | ರೂ.50,000 | ರೂ.25,00,000 |

ಜಿಲ್ಲಾವಾರು ಪ್ರಶಸ್ತಿ – ಜಿಲ್ಲಾವಾರು ಪ್ರಶಸ್ತಿ ಆಯ್ಕೆಗೆ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ಅಧ್ಯಕ್ಷತೆಯಲ್ಲಿ ಜಿಲ್ಲಾಧಿಕಾರಿ, ಜಿಲ್ಲಾ ಮುಖ್ಯ ಕಾರ್ಯನಿರ್ವಹಣಾಧಿಕಾರಿ, ಇಬ್ಬರು ಗಣ್ಯ ವ್ಯಕ್ತಿಗಳು ಮತ್ತು ಆಯಾ ಜಿಲ್ಲೆಗೆ ಸಂಬಂಧಪಟ್ಟ ಜಿಲ್ಲಾ ಸರ್ಕಾರಿ ನೌಕರರ ಸಂಘದ ಅಧ್ಯಕ್ಷರನ್ನು ಒಳಗೊಂಡಂತೆ, ಮೌಲ್ಯಮಾಪನ ಸಮಿತಿಯನ್ನು ರಚಿಸುವುದು. ಎಂದು ಓದಿಕೊಳ್ಳತಕ್ಕದ್ದು.

ರಾಜ್ಯ ಪ್ರಶಸ್ತಿ: ರಾಜ್ಯ ಪ್ರಶಸ್ತಿ ಸಮಿತಿಯನ್ನು ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ಮತ್ತು ಅಪರ ಮುಖ್ಯ ಕಾರ್ಯದರ್ಶಿಗಳ ಉಪಾಧ್ಯಕ್ಷತೆಯಲ್ಲಿ ಇಬ್ಬರು ಗಣ್ಯ ವ್ಯಕ್ತಿಗಳು ಹಾಗೂ ರಾಜ್ಯ ಸರ್ಕಾರಿ ನೌಕರರ ಸಂಘದ ಅಧ್ಯಕ್ಷರನ್ನೊಳಗೊಂಡಂತೆ, ಮೌಲ್ಯಮಾಪನ ಸಮಿತಿಯನ್ನು ರಚಿಸುವುದು. ಎಂದು ಓದಿಕೊಳ್ಳತಕ್ಕದ್ದು.

- ಸರ್ಕಾರದ ಆದೇಶ ಸಂಖ್ಯೆ:ಸಿಆಸುಇ:105:ಇಆಸು:2011, ದಿನಾಂಕ:20.11.2012 ರಲ್ಲಿ ಸರ್ಕಾರವು ಆದೇಶಿದ 1ನೇ ಕಂಡಿಕೆಯ 2ನೇ ಭಾಗದ ನಂತರ **"ಗೃಹ ಇಲಾಖೆ ಮತ್ತು ಶಿಕ್ಷಣ ಇಲಾಖೆಯ ಲಿಪಿಕ ಸಿಬ್ಬಂದಿ ವರ್ಗವು ಸೇರಿದಂತೆ"** ಎಂದು ಓದಿಕೊಳ್ಳತಕ್ಕದ್ದು.

(ಡಾ.ಗೀತಾ.ಎಲ್)
ಸರ್ಕಾರದ ಅಧೀನ ಕಾರ್ಯದರ್ಶಿ.
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ
(ಆಡಳಿತ ಸುಧಾರಣೆ-ತರಬೇತಿ)
(ದೂರವಾಣಿ ಸಂಖ್ಯೆ:22032655)

ಇವರಿಗೆ,

1. ಮಹಾಲೇಖಪಾಲರು (ಲೆಕ್ಕಪತ್ರ 1 ಮತ್ತು 2), (ಆಡಿಟ 1 ಮತ್ತು 2) ಕರ್ನಾಟಕ ಬೆಂಗಳೂರು.

2. ಸರ್ಕಾರದ ಎಲ್ಲಾ ಪ್ರಧಾನ ಕಾರ್ಯದರ್ಶಿಗಳು / ಕಾರ್ಯದರ್ಶಿಗಳು.
3. ಮುಖ್ಯ ಮಂತ್ರಿಗಳ ಪ್ರಧಾನ ಕಾರ್ಯದರ್ಶಿ.
4. ಎಲ್ಲಾ ಇಲಾಖಾ ಮುಖ್ಯಸ್ಥರುಗಳು.
5. ಎಲ್ಲಾ ಜಿಲ್ಲೆಗಳ ಜಿಲ್ಲಾಧಿಕಾರಿಗಳು / ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗಳು.
6. ಸರ್ಕಾರದ ಮುಖ್ಯ ಕಾರ್ಯದರ್ಶಿಗಳ ಆಪ್ತ ಕಾರ್ಯದರ್ಶಿ / ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಮತ್ತು ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಹಾಗೂ ಅಭಿವೃದ್ಧಿ ಆಯುಕ್ತರ ಆಪ್ತ ಕಾರ್ಯದರ್ಶಿ.
7. ಸರ್ಕಾರದ ಎಲ್ಲಾ ಅಪರ ಕಾರ್ಯದರ್ಶಿಗಳು / ಜಂಟಿ ಕಾರ್ಯದರ್ಶಿಗಳು / ಉಪ ಕಾರ್ಯದರ್ಶಿಗಳು ಮತ್ತು ಅಧೀನ ಕಾರ್ಯದರ್ಶಿಗಳು.
8. ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವೆಚ್ಚ-12)
9. ವಾರದ ರಾಜ್ಯ ಪತ್ರ / ಹೆಚ್ಚುವರಿ ಪ್ರತಿ / ಶಾಖಾ ರಕ್ಷಾ ಕಡತ.

# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ:- ರಾಜ್ಯ ಸರ್ಕಾರದ ಸರ್ವೋತ್ತಮ ಸೇವಾ ಪ್ರಶಸ್ತಿ ಅನುಷ್ಠಾನ ಕುರಿತು.

ಓದಲಾಗಿದೆ: 1. ಸರ್ಕಾರದ ಆದೇಶ ಸಂಖ್ಯೆ:ಸಿಆಸುಇ:34:ಇಆಸು:2002 ದಿನಾಂಕ:13.08.2003.
2. ಸರ್ಕಾರದ ಆದೇಶ ಸಂಖ್ಯೆ:ಸಿಆಸುಇ:63:ಇಆಸು:2008 ದಿನಾಂಕ:04.03.2011.

ಪ್ರಸ್ತಾವನೆ :

ಮೇಲೆ ಓದಲಾದ (1)ರ ಸರ್ಕಾರದ ಆದೇಶ ಸಂಖ್ಯೆ:ಸಿಆಸುಇ:34:ಇಆಸು:2002 ದಿನಾಂಕ:13.08.2003ರಲ್ಲಿ ಅತ್ಯುನ್ನತ ಸೇವೆಗೈದ/ಸಾಧನೆ ಗೈದ ರಾಜ್ಯ ಸರ್ಕಾರಿ ನೌಕರರಿಗೆ ರಾಜ್ಯ ಪ್ರಶಸ್ತಿಯನ್ನು ನೀಡುವ ಯೋಜನೆಯನ್ನು ಅನುಷ್ಠಾನಗೊಳಿಸಲಾಯಿತು. ಈ ಪ್ರಶಸ್ತಿಯನ್ನು ಒಂದು ಬಾರಿ ಅಪರ ಕಾರ್ಯದರ್ಶಿ ಹಂತದಿಂದ ಕೆಳಹಂತದ ಅಧಿಕಾರಿ / ನೌಕರರಿಗೆ ಸಚಿವಾಲಯ ಮತ್ತು ಕ್ಷೇತ್ರ ಇಲಾಖೆಗಳನ್ನು ಒಳಗೊಂಡಂತೆ, ಕನಿಷ್ಠ 5 ವರ್ಷ ಸೇವೆ ಸಲ್ಲಿಸಿದವರಿಗೆ ಮತ್ತು ಅಖಿಲ ಭಾರತ ಸೇವೆಗಳ ಅಧಿಕಾರಿಗಳನ್ನು ಹೊರತು ಪಡಿಸಿ, ನೀಡಲಾಗುತ್ತಿತ್ತು. ಈ ಪ್ರಶಸ್ತಿಗೆ ಅಧಿಕಾರಿ / ನೌಕರರ ಸೇವಾ ಕ್ಷಮತೆಯೇ ಮಾನ ದಂಡವಾಗಿದ್ದು, ಪ್ರಶಸ್ತಿಯ ಮೊತ್ತವು ಈ ಕೆಳಗಿನಂತಿತ್ತು.

| ಕ್ರಮ ಸಂಖ್ಯೆ | ವೃಂದ | ಪ್ರಶಸ್ತಿಗಳ ಸಂಖ್ಯೆ | ಜಿಲ್ಲಾವಾರು ಮೊತ್ತ | ರಾಜ್ಯವಾರು ಮೊತ್ತ |
|---|---|---|---|---|
| 1. | "ಸಿ" ವೃಂದ | 2 | ರೂ.20,000 | ರೂ. 40,000 |
| 2. | ಪತ್ರಾಂಕಿತ ವೃಂದ-2 | 2 | ರೂ.20,000 | ರೂ. 40,000 |
| 3. | ಪತ್ರಾಂಕಿತ ವೃಂದ-1 | 2 | ರೂ.20,000 | ರೂ. 40,000 |
| | | ಒಟ್ಟು | **ರೂ.60,000** | **ರೂ.1,20,000** |

2. ಈ ಪ್ರಶಸ್ತಿ ಪುರಸ್ಕಾರಕ್ಕೆ ಒಂದು ವರ್ಷಕ್ಕೆ ತಗಲುತ್ತಿದ್ದ ಒಟ್ಟು ವೆಚ್ಚ
60,000 x30 ಜಿಲ್ಲೆಗಳು = 18,00,000/- + 1,20,000= 19,20,000/-

3. ಕೇಂದ್ರ ಸರ್ಕಾರವು ಈ ಮಧ್ಯೆ 2006-2007 ನೇ ಸಾಲಿನಲ್ಲಿ ಅತ್ಯುತ್ತಮ ನಾಗರೀಕ ಸೇವೆ ಗೈದವರಿಗೆ ಪ್ರಧಾನ ಮಂತ್ರಿಗಳ ಪ್ರಶಸ್ತಿಯನ್ನು ನೀಡಲು ಆರಂಭಿಸಿ ಆನಂತರ ಕೇಂದ್ರ ಸರ್ಕಾರಿ ನೌಕರರಿಗೂ ಮತ್ತು ನಾಗರೀಕರಿಗೂ ನೀಡುವ ಕುರಿತು ಪರಿಷ್ಕೃತ ಆದೇಶವನ್ನು ಅಧಿಕೃತ ಜ್ಞಾಪನ ಸಂಖ್ಯೆ:33011/1/98 ದಿನಾಂಕ:21.01.1998 ಮತ್ತು 33011/1/2005 ದಿನಾಂಕ:19.08.2010ರಲ್ಲಿ ರದ್ದು ಪಡಿಸಿದ ಹಿನ್ನಲೆಯಲ್ಲಿ ಕರ್ನಾಟಕ ರಾಜ್ಯ ಸರ್ಕಾರದ ವತಿಯಿಂದ ಅತ್ಯುನ್ನತ ಸಾಧನೆಗೈದ ನೌಕರರಿಗೆ ನೀಡಲಾಗುತ್ತಿದ್ದ ರಾಜ್ಯ ಪ್ರಶಸ್ತಿ ಪುರಸ್ಕಾರ ನೀತಿಯನ್ನು ಸರ್ಕಾರದ ಆದೇಶ ಸಂಖ್ಯೆ:ಸಿಆಸುಇ:63:ಇಆಸು:2008 ದಿನಾಂಕ:04.03.2011 ರಲ್ಲಿ ಹಿಂದಕ್ಕೆ ಪಡೆದಿದೆ.

ಮುಂದುವರೆದಿದೆ.....

4. ಪ್ರಧಾನ ಮಂತ್ರಿಗಳ ಪ್ರಶಸ್ತಿಯನ್ನು ಕೇಂದ್ರ ಸರ್ಕಾರದಿಂದ ಒಂದು ವರ್ಷದಲ್ಲಿ ಒಂದು ರಾಜ್ಯಕ್ಕೆ ಒಬ್ಬ ವ್ಯಕ್ತಿಗೆ ಮಾತ್ರ ಸಿಗುವ ಅವಕಾಶವಿದ್ದು, ಕರ್ನಾಟಕ ರಾಜ್ಯವನ್ನು ಗಣನೆಗೆ ತೆಗೆದುಕೊಂಡಲ್ಲಿ ಈ ತನಕ ಕೇವಲ ಇಬ್ಬರಿಗೆ ಮಾತ್ರ ಈ ಪ್ರಶಸ್ತಿ ಬಾಜನವಾಗಿದೆ. ಆದ್ದರಿಂದ ಈ ಸಂದರ್ಭದಲ್ಲಿ ರಾಜ್ಯಸರ್ಕಾರದ ವತಿಯಿಂದ "ಸರ್ವೋತ್ತಮ ಸೇವಾ ಪ್ರಶಸ್ತಿ" ಯೋಜನೆ ಆರಂಭಿಸುವುದು ಸೂಕ್ತವಾಗಿರುತ್ತದೆ, ಆದರಂತೆ ಈ ಆದೇಶ.

**ಸರ್ಕಾರದ ಆದೇಶ ಸಂಖ್ಯೆ:ಸಿಆಸುಇ:105:ಇಆಸು:2011, ಬೆಂಗಳೂರು ದಿನಾಂಕ:20.11.2012.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನಲೆಯಲ್ಲಿ ಅತ್ಯುನ್ನತ ಸೇವೆಗೈದ/ಸಾಧನೆ ಗೈದ ರಾಜ್ಯ ಸರ್ಕಾರಿ ನೌಕರರಿಗೆ "ಸರ್ವೋತ್ತಮ ಸೇವಾ ಪ್ರಶಸ್ತಿ" ನೀಡುವ ಯೋಜನೆಗಾಗಿ ಈ ಕೆಳಕಂಡಂತೆ ಮಾರ್ಗಸೂಚಿಯನ್ನು ರಚಿಸಲಾಗಿದೆ.

1. ಈ ಪ್ರಶಸ್ತಿಗಳನ್ನು ಪ್ರತಿ ವರ್ಷ ಗಣರಾಜ್ಯೋತ್ಸವದ ದಿನದಂದು ಅಂದರೆ 26ನೇ ಜನವರಿಯಂದು ನೀಡಲಾಗುವುದು ಮತ್ತು ಮೊದಲ ಬಾರಿಯಾಗಿ ಪ್ರಶಸ್ತಿಯನ್ನು 26.01.2013ರಂದು ನೀಡುವುದು.

2. ಗೃಹ ಇಲಾಖೆ ಮತ್ತು ಶಿಕ್ಷಣ ಇಲಾಖೆಯು ತನ್ನದೆ ಪ್ರತ್ಯೇಕ ಪ್ರಶಸ್ತಿ ಯೋಜನೆಯನ್ನು ಹೊಂದಿರುವುದರಿಂದ ಆ ಇಲಾಖೆಗಳನ್ನು ಹೊರತುಪಡಿಸಿ ಉಳಿದ ಎಲ್ಲಾ ಇಲಾಖೆಗಳು ಮತ್ತು ಅದರ ಲಿಪಿಕ ಸಿಬ್ಬಂದಿ ವರ್ಗವು ಈ ಪ್ರಶಸ್ತಿ ಯೋಜನೆಯಲ್ಲಿ ಸೇರಿದೆ.

3. ಈ ಯೋಜನೆಯು ಭಾರತೀಯ ಸೇವಾ ಅಧಿಕಾರಿಗಳಿಗೆ ಅನ್ವಯಿಸುವುದಿಲ್ಲ.

ಕರ್ನಾಟಕ ರಾಜ್ಯದಲ್ಲಿ ವೃಂದ – ಎ, ಬಿ, ಸಿ ಮತ್ತು ಡಿ ಒಳಗೊಂಡಂತೆ ಒಟ್ಟು 6 ಲಕ್ಷ ಅಧಿಕಾರಿ / ಸಿಬ್ಬಂದಿಗಳಿದ್ದು, ಈ ಸಂದರ್ಭದಲ್ಲಿ ರಾಜ್ಯಸರ್ಕಾರದ ವತಿಯಿಂದ "ಸರ್ವೋತ್ತಮ ಸೇವಾ ಪ್ರಶಸ್ತಿ" ಯೋಜನೆ ಆರಂಭಿಸುವುದು ಸೂಕ್ತವಾಗಿರುತ್ತದೆ, ಅಲ್ಲದೇ ಅತ್ಯುನ್ನತ ಸಾಧನೆ / ವಿನೂತನ ರೀತಿ ಕಾರ್ಯ ಪದ್ಧತಿಯನ್ನು ರೂಪಿಸಿಕೊಂಡಿರುವವರನ್ನು ಈ ಕೆಳಗಿನ ರಂಗಗಳಲ್ಲಿ ಗುರುತಿಸಲುದ್ದೇಶಿಸಿದೆ.

- ವಿನೂತನ ರೀತಿ ಪದ್ಧತಿ / ಯೋಜನೆಯನ್ನು ಜಾರಿಗೆ ತರುವುದು.
- ಕಾರ್ಯ ವೃಂದದಲ್ಲಿ ಬದಲಾವಣೆ ಮತ್ತು ಸಂಸ್ಥೆಗಳ ವೃದ್ಧಿ.

ಮುಂದುವರೆದಿದೆ.....3

- ನಾಗರೀಕ ಸೇವಾ ವ್ಯವಸ್ಥೆಯಲ್ಲಿ ಗುಣಾತ್ಮಕ, ನಾಗರೀಕ ಸ್ನೇಹಿ ಮತ್ತು ಭ್ರಷ್ಟಾಚಾರ ವಿಲ್ಲದ ವಾತಾವರಣವನ್ನು ನಿರ್ಮಿಸುವುದು.
- ನಾಗರೀಕರ ಅವಶ್ಯಕತೆಗನುಗುಣವಾಗಿ ವಿನೂತನ ರೀತಿ ಪದ್ಧತಿ ಅಳವಡಿಸಿಕೊಳ್ಳುವಿಕೆ.
- ನೈಸರ್ಗಿಕ ವಿಕೋಪ ಸಂದರ್ಭದಲ್ಲಿ ಅತ್ಯುನ್ನತ ಕಾರ್ಯ.
- ಮೌಲ್ಯವರ್ಧಿತ ಸೇವೆ, ವೃದ್ಧಿ, ಮುಂದಾಳತ್ವ ಮತ್ತು ಚಲನಶೀಲಗಳ ರಚನೆ.

ಈ ಪ್ರಶಸ್ತಿಗೆ ನಾಮನಿರ್ದೇಶನವನ್ನು ನಿಶ್ಚಿತ ಪ್ರಪತ್ರದಲ್ಲಿ ಸ್ವಯಂ ನಾಮನಿರ್ದೇಶನ / ಅಥವಾ ಆ ಕಾರ್ಯ ತಿಳಿದಿರುವ ವ್ಯಕ್ತಿಯಿಂದ ನಾಮನಿರ್ದೇಶನ ಮತ್ತು ಒಬ್ಬ ವ್ಯಕ್ತಿಗನುಗುಣವಾಗಿ ಹಲವು ನಾಮನಿರ್ದೇಶನಗಳು ಸ್ವೀಕರಿಸಿದ್ದಲ್ಲಿ, ಅವುಗಳನ್ನು ಒಂದು ನಾಮನಿರ್ದೇಶನವೆಂದು ಆ ವರ್ಷದಲ್ಲಿ ಪರಿಗಣಿಸಲಾಗುವುದು.

ಪ್ರತಿಯೊಂದು ನಾಮನಿರ್ದೇಶನಕ್ಕು ಅದರ ಸಾಧನೆಗಳು ಈ ಕೆಳಗೆ ತಿಳಿಸಿರುವ ಮಾನದಂಡಕ್ಕನುಗುಣವಾಗಿರುವುದು.

- ವಿನೂತನತೆ ಕಾರ್ಯರೂಪಕ್ಕೆ ತರುವುದು ಮತ್ತು ಮುಂದಾಳತ್ವ ವಹಿಸುವುದು.
- ಪ್ರಸ್ತುತ ಇರುವ ಅಡೆತಡೆಗಳಿಗೆ ಮಾಹಿತಿ ಪರಿಶೋಧನೆ ಮುಖಾಂತರ ಪರಿಹಾರ ಕಂಡುಕೊಳ್ಳುವಿಕೆ
- ಕಿರು ಹಾಗೂ ದೀರ್ಘ ಸಮಯದ ಫಲಿತಾಂಶ ಸಾಧನೆಗೆ ಯೋಜನೆ.
- ಕಾರ್ಯ ಕ್ಷಮತೆ ಮತ್ತು ಸೇವಾ ವೃದ್ಧಿಗೆ ಮಾನವ ಸಂಪನ್ಮೂಲ ಅಭಿವೃದ್ಧಿ.
- ನಿಗದಿತ ಫಲಿತಾಂಶ ಸಾಧನೆಗೆ ಸರಳೀಕೃತ ಕಾರ್ಯ ವಿಧಾನ ವ್ಯವಸ್ಥೆ.
- ಕಾರ್ಯ ನಿರ್ವಹಣೆ ಪಲಿತಾಂಶವು ಗುಣಾತ್ಮಕ ಅಂಶದಲ್ಲಿರುವುದು.
- ಪ್ರತ್ಯಕ್ಷ ಹಾಗೂ ಪರೋಕ್ಷವಾಗಿ ನಾಗರೀಕರಿಗೆ ಅನುಕೂಲ.
- ಸರ್ಕಾರದ / ಸಾರ್ವಜನಿಕ ಹಣದ ಉಳಿತಾಯ.

ಮೇಲಿನ ಮಾನದಂಡಗಳ ಹಿನ್ನೆಲೆಯಲ್ಲಿ ಮೊದಲ ಹಂತ ಹಾಗೂ ನಂತರದ ಹಂತದ ಗುರಿ ಸಾಧನೆಯ ಪರಿಶೀಲನೆ ಅತಿ ಮುಖ್ಯವಿದ್ದು, ಇವನ್ನು ಮೌಲ್ಯ ಮಾಪನ ಸಮಿತಿಯಲ್ಲಿ ಪರಿಶೀಲಿಸಲಾಗುವುದು. ಯೋಜನೆಯು ನಾಮನಿರ್ದೇಶನದ ದಿನಾಂಕಕ್ಕೆ ಕನಿಷ್ಠ ಒಂದು ವರ್ಷ ಕಾರ್ಯರೂಪದಲ್ಲಿರಬೇಕು.

ಮುಂದುವರೆದಿದೆ...4

ಈ ಯೋಜನೆ ಅಡಿ ಪ್ರಶಸ್ತಿ ಪುರಸ್ಕಾರವು ಮೂರು ಹಂತದಲ್ಲಿ ಈ ಮುಂದಿನಂತಿದೆ.

| ಕ್ರಮ ಸಂಖ್ಯೆ | ಪ್ರಶಸ್ತಿ | ಪ್ರಶಸ್ತಿಗಳ ಸಂಖ್ಯೆ | ಪ್ರಶಸ್ತಿಯ ಮೊತ್ತ | ಒಟ್ಟು |
|---|---|---|---|---|
| 1. | ಜಿಲ್ಲಾವಾರು ಪುರಸ್ಕಾರ (ಪ್ರತಿಯೊಂದು ಜಿಲ್ಲೆಗೆ ಒಟ್ಟು 30 ಜಿಲ್ಲೆ) | 6 | ರೂ.10,000 | ರೂ.18,00,000 |
| 2. | ಇಲಾಖಾವಾರು | 30 | ರೂ.15,000 | ರೂ. 4,50,000 |
| 3. | ರಾಜ್ಯ ಪ್ರಶಸ್ತಿ | 3 | ರೂ.25,000 | ರೂ. 75,000 |
| | ಒಟ್ಟು | 39 | ರೂ.50,000 | ರೂ.23,25,000 |

<u>ಜಿಲ್ಲಾವಾರು ಪ್ರಶಸ್ತಿ:</u> ಜಿಲ್ಲಾವಾರು ಪ್ರಶಸ್ತಿ ಆಯ್ಕೆಗೆ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ಅಧ್ಯಕ್ಷತೆಯಲ್ಲಿ ಜಿಲ್ಲಾಧಿಕಾರಿ, ಜಿಲ್ಲಾ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಮತ್ತು ಇಬ್ಬರು ಗಣ್ಯ ವ್ಯಕ್ತಿಗಳ ಸದಸ್ಯರನ್ನೊಳಗೊಂಡಂತೆ ಮೌಲ್ಯಮಾಪನ ಸಮಿತಿಯನ್ನು ರಚಿಸುವುದು. ನಾಗರೀಕರು ಕೂಡ ಅಧಿಕಾರಿ ಸಿಬ್ಬಂದಿಗಳ ಪರವಾಗಿ ಪ್ರಶಸ್ತಿ ಆಯ್ಕೆಗೆ ನಾಮನಿರ್ದೇಶನಗಳನ್ನು ಸಲ್ಲಿಸಬಹುದು ಮೌಲ್ಯಮಾಪನ ಸಮಿತಿಯು ನಾಮನಿರ್ದೇಶನವನ್ನು ಕರೆದು ಬಂದಂತಹ ನಾಮನಿರ್ದೇಶನಗಳನ್ನು ಪರಿಶೀಲಿಸಿ ಆಯ್ಕೆಯಾದವರಿಗೆ ಜಿಲ್ಲಾಡಳಿತ ಕಾರ್ಯಾಲಯದಲ್ಲಿ ಜಿಲ್ಲಾ ಉಸ್ತುವಾರಿ ಮಂತ್ರಿಗಳಿಂದ ದಿನಾಂಕ:26 ಜನವರಿಯಂದು ಪ್ರಶಸ್ತಿ ಪ್ರಧಾನ ಮಾಡಲು ಕ್ರಮವಹಿಸುವುದು. ಅಲ್ಲದೇ ಜಿಲ್ಲಾವಾರು ಪ್ರಶಸ್ತಿಗೆ ಅರ್ಹವಾದ ನಾಮನಿರ್ದೇಶನಗಳನ್ನು ಇಲಾಖಾವಾರು ಪ್ರಶಸ್ತಿ ಆಯ್ಕೆಗೂ ಕಳುಹಿಸಬಹುದು.

<u>ಇಲಾಖಾವಾರು ಪ್ರಶಸ್ತಿ:</u> ಇಲಾಖಾವಾರು ಪ್ರಶಸ್ತಿ ಆಯ್ಕೆಗೆ ಸಂಬಂಧಪಟ್ಟ ಇಲಾಖೆಯ ಸರ್ಕಾರದ ಪ್ರಧಾನ ಕಾರ್ಯದರ್ಶಿ / ಕಾರ್ಯದರ್ಶಿ ರವರ ಅಧ್ಯಕ್ಷತೆಯಲ್ಲಿ ಕ್ಷೇತ್ರೀಯ ಇಲಾಖಾ ಮುಖ್ಯಸ್ಥರು ಮತ್ತು ಇಬ್ಬರು ಗಣ್ಯ ವ್ಯಕ್ತಿಗಳ ಸದಸ್ಯರನ್ನೊಳಗೊಂಡಂತೆ ಮೌಲ್ಯಮಾಪನ ಸಮಿತಿಯನ್ನು ರಚಿಸುವುದು. ಮೌಲ್ಯಮಾಪನ ಸಮಿತಿಯು ನಾಮನಿರ್ದೇಶನಗಳನ್ನು ಕರೆದು ಬಂದಂತಹ ನಾಮನಿರ್ದೇಶನಗಳಲ್ಲಿ ಸೂಕ್ತವಾದದ್ದನ್ನು ಆಯ್ಕೆಮಾಡಿ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಆಡಳಿತ ಸುಧಾರಣೆ) ವಿಭಾಗಕ್ಕೆ ಕಳುಹಿಸಿಕೊಡುವುದು. ಸದರಿ ಇಲಾಖೆಯ ಪ್ರಧಾನ ಕಾರ್ಯದರ್ಶಿ / ಕಾರ್ಯದರ್ಶಿಗಳು ನಾಮನಿರ್ದೇಶನಗಳನ್ನು ಪರಿಶೀಲಿಸಿ ಆಯ್ಕೆಯಾದ ನಾಮನಿರ್ದೇಶನಕ್ಕೆ ಪ್ರಶಸ್ತಿ ಪುರಸ್ಕಾರವನ್ನು ಸಂಬಂಧಪಟ್ಟ ಇಲಾಖಾ ಸಚಿವರಿಂದ ಇಲಾಖೆಯ ಮುಖ್ಯ ಕಾರ್ಯಕ್ರಮದಂದು ವಿತರಿಸುವುದು. ಇಲಾಖಾವಾರು ಪ್ರಶಸ್ತಿಯನ್ನು ಪಡೆದ ನಾಮನಿರ್ದೇಶನಗಳನ್ನು ರಾಜ್ಯ ಪುರಸ್ಕಾರಕ್ಕೂ ಕಳುಹಿಸಿಕೊಡಬಹುದು. ಸಚಿವಾಲಯದ ಇಲಾಖೆ ಮತ್ತು ಕ್ಷೇತ್ರೀಯ ಇಲಾಖೆಗಳ ಹೆಸರುಗಳನ್ನು (ಶಿಕ್ಷಣ ಇಲಾಖೆ ಮತ್ತು ಪೋಲಿಸ್ ಇಲಾಖೆಯನ್ನು ಹೊರತುಪಡಿಸಿ) ಅನುಬಂಧ-1 ರಲ್ಲಿ ವಿವರಿಸಿದೆ.

ಮುಂದುವರೆದಿದೆ...5

<u>ರಾಜ್ಯ ಪ್ರಶಸ್ತಿ:</u> ರಾಜ್ಯ ಪ್ರಶಸ್ತಿ ಸಮಿತಿಯನ್ನು ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ಮತ್ತು ಅಪರ ಮುಖ್ಯ ಕಾರ್ಯದರ್ಶಿಗಳ ಉಪಾಧ್ಯಕ್ಷತೆಯಲ್ಲಿ ಇಬ್ಬರು ಗಣ್ಯ ವ್ಯಕ್ತಿಗಳನ್ನೊಳಗೊಂಡು [illegible] ಮತ್ತು ಇಲಾಖಾವಾರು ಪ್ರಶಸ್ತಿ ಪಡೆದ ನಾಮನಿರ್ದೇಶನಗಳನ್ನು ರಾಜ್ಯ ಪ್ರಶಸ್ತಿಗೆ ಆಯ್ಕೆಮಾಡುವುದು. ರಾಜ್ಯ ಪ್ರಶಸ್ತಿಯನ್ನು ಘನತೆವೆತ್ತ ಕರ್ನಾಟಕ ರಾಜ್ಯ ಪಾಲರಿಂದ ಮತ್ತು ಮಾನ್ಯ ಮುಖ್ಯಮಂತ್ರಿಗಳಿಂದ ಪ್ರತಿ ವರ್ಷ ದಿನಾಂಕ:26 ಜನವರಿ ಮಾಸದಲ್ಲಿ ವಿತರಿಸುವುದು.

ರಾಜ್ಯ ಪ್ರಶಸ್ತಿ ಸಮಿತಿಯು ಆಯ್ಕೆಯಾದ ನಾಮನಿರ್ದೇಶನಗಳನ್ನು **ಸೆಂಟರ್ ಫಾರ್ ಗುಡ್** ಗವರ್ನೆನ್ಸ್ ಅಥವಾ **ಕರ್ನಾಟಕ** ಮೌಲ್ಯಮಾಪನ ಪ್ರಾಧಿಕಾರ ಅಥವಾ ಯಾವುದಾದರು ಸಂಸ್ಥೆಯಿಂದ ಅಗತ್ಯವಿದ್ದಲ್ಲಿ ಮೌಲ್ಯಮಾಪನ ಮಾಡಿಸಬಹುದು. ಇದಲ್ಲದೇ ಪ್ರಶಸ್ತಿ ಪಡೆದವರಿಗೆ ನಗದು ಬಹುಮಾನವನ್ನು **ಕೊಡುವುದಲ್ಲದೆ**, ಪ್ರಶಸ್ತಿಗೆ ಆಯ್ಕೆಯಾದವರನ್ನು ಅವರದ್ದೇ ರಂಗದಲ್ಲಿ ಹೆಚ್ಚಿನ ಕೌಶಲ್ಯ ತರಬೇತಿಗೆ ಹೆಸರಾಂತ ತರಬೇತಿ ಸಂಸ್ಥೆಗಳಿಗೆ ಕಳುಹಿಸಿಕೊಡುವುದು.

ಇದಕ್ಕೆ ತಗಲುವ ವೆಚ್ಚವನ್ನು ಆಡಳಿತ ಸುಧಾರಣೆ ಚಾಲೆಂಜ್ ಫಂಡ್ ಮತ್ತು ಇತರೆ ವೆಚ್ಚ ಲೆಕ್ಕ ಶೀರ್ಷಿಕೆ-2052-00-090-0-25-059 ಅಡಿಯಲ್ಲಿ ಭರಿಸುವುದು.

ಈ ಆದೇಶವನ್ನು ಆರ್ಥಿಕ ಇಲಾಖೆಯು ಟಿಪ್ಪಣಿ ಸಂಖ್ಯೆ:ಆಇ:851:ವೆಚ್ಚ-12:2012 ದಿನಾಂಕ:22.09.2012ರಲ್ಲಿ ನೀಡಿರುವ ಸಹಮತದ ಅನುಸಾರ ಹೊರಡಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಡಾ.ಗೀತಾ.ಎಲ್)
ಸರ್ಕಾರದ ಅಧೀನ ಕಾರ್ಯದರ್ಶಿ
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ
(ಆಡಳಿತ ಸುಧಾರಣೆ-ತರಬೇತಿ)

ಇವರಿಗೆ,

1. ಮಹಾಲೇಖಪಾಲರು (ಲೆಕ್ಕಪತ್ರ 1 ಮತ್ತು 2). (ಆಡಿಟ 1 ಮತ್ತು 2) ಕರ್ನಾಟಕ ಬೆಂಗಳೂರು.
2. ಸರ್ಕಾರದ ಎಲ್ಲಾ ಪ್ರಧಾನ ಕಾರ್ಯದರ್ಶಿಗಳು / ಕಾರ್ಯದರ್ಶಿಗಳು.
3. ಮುಖ್ಯ ಮಂತ್ರಿಗಳ ಪ್ರಧಾನ ಕಾರ್ಯದರ್ಶಿ.

ಮುಂದುವರೆದಿದೆ...6

4. ಎಲ್ಲಾ ಇಲಾಖಾ ಮುಖ್ಯಸ್ಥರುಗಳು.
5. ಎಲ್ಲಾ ಜಿಲ್ಲೆಗಳ ಜಿಲ್ಲಾಧಿಕಾರಿಗಳು / ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು.
6. ಸರ್ಕಾರದ ಮುಖ್ಯ ಕಾರ್ಯದರ್ಶಿಗಳ ಆಪ್ತ ಕಾರ್ಯದರ್ಶಿ / ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಮತ್ತು ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಹಾಗೂ ಅಭಿವೃದ್ಧಿ ಆಯುಕ್ತರ ಆಪ್ತ ಕಾರ್ಯದರ್ಶಿ.
7. ಸರ್ಕಾರದ ಎಲ್ಲಾ ಅಪರ ಕಾರ್ಯದರ್ಶಿಗಳು / ಜಂಟಿ ಕಾರ್ಯದರ್ಶಿಗಳು / ಉಪ ಕಾರ್ಯದರ್ಶಿಗಳು ಮತ್ತು ಅಧೀನ ಕಾರ್ಯದರ್ಶಿಗಳು.
8. ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವೆಚ್ಚ–12)
9. ವಾರದ ರಾಜ್ಯ ಪತ್ರ / ಹೆಚ್ಚುವರಿ ಪ್ರತಿ / ಶಾಖಾ ರಕ್ಷಾ ಕಡತ.

Annexure-I

## SARVOTTAMA SEVA PRASHASHTHI SCHEME

1. Animal Husbandry and Fisheries Department.
2. Agriculture Department.
3. All Secretariat Departments.
4. Commerce and Industries Department.
5. Co-operation Department.
6. Department of Public Enterprises.
7. Department of Parliamentary Affair & Legislation.
8. Energy Department..
9. Finance Department.
10. Food and Civil Supplies Department.
11. Forest, Environment & Ecology.
12. Health & Family Welfare Department & Medical Education.
13. Horticulture Department.
14. Housing Department.
15. IT & BT
16. Infrastructure Development Department.
17. Kannada, Culture & Information Department.
18. Labour Department.
19. Law, Justice & Human Rights Department.
20. Minority Welfare Department.
21. Planning Department.
22. Public Works port & Inland Water Transport Department.
23. Revenue Department.
24. Rural Development & Panchayat Raj
25. Social Welfare Department.
26. Tourism Department.
27. Urban Development Department.
28. Water Recourses Development Department.
29. Women & Child Development Department.
30. Youth Services Department.

208
207

# SARVOTTAM SEVA PRASHASHTHI SCHEME

**Annexure-II**

**Nomination form for the year 2012-13**

1. **Details of the Nominee.**

   a) Name of the nominee.
   b) Designation of the nominee at the time of the initiative.
   c) Department/Organization/ of the nominee at the time of the initiative, with complete postal address.
   d) Nominee currently posted at.
   e) Current designation
   f) Present postal address with Pin code.
   g) Contact details (Phone & Fax Nos, e-mail ID, Mobile Phone Nos).

2. **Nominating Authority:**

   a) Name of the nominating authority.
   b) Name of the Department/Organization.
   c). Designation of the Nominating Authority.
   d) Complete postal address with Pin Code.
   e) Contact details (Phone & Fax Nos, e-mail ID, Mobile Phone Nos).

3. **Please furnish the details about the initiative, strictly under the subheads prescribed below: (The entire description and narration should not exceed five one –side A4 size paper).**

   a) Title of the initiative.
   b) Department/Organization where the initiative was implemented.
   c) Background of the initiative
   d) Motivator(s) for the project initiative.
   e) Purpose & priorities of the initiative.
   f) Date of implementation of the initiative.
   g) Strategies adopted for bringing about the transformation and positive impact.

Contd...2

h) Role of various stakeholders most importantly, role and details of involvement of the nominee in the initiative.

i) Highlights/positive features of the initiative under each of the following important dimensions and their outcomes:
   - Transparency and stakeholder participation along with beneficiaries feedback
   - Simplified procedures: Innovativeness of the initiative and its replicability
   - Increased efficiency of outputs/processes and effectiveness of outcomes, Improvement in measurable indicators and Improvement in delivery time of services
   - Display of leadership/Teamwork by the nominee
   - .Sustainability of the initiative.

4. **Was this initiative or nominee winner of any other Award(s)**

Yes

No

(If yes, details of the award won)